ಕಥೆ

# ಜಾತಕ



**ಪ್ರೇಮಶೇಖರ**

ಕಲೆ: ರೂಪಶ್ರೀ ಕಲ್ಲಿಗನೂರು

'ನಾನೊಬ್ಬ ಅಲೆಮಾರಿ' ದನಿಯೆತ್ತಿ ಕೂಗಿದೆ. ಹಳೆಯದಾವುದೂ ಉಳಿಯದೇ, ಹೊಸದಾವುದೂ ಹಸನೆನಿಸದೇ, ನಿರಾಶೆ, ಹತಾಶೆಯಲ್ಲಿ ಗೊತ್ತುಗುರಿಯಿಲ್ಲದೇ ದಿಕ್ಕುದಿಕ್ಕುಗಳಲ್ಲಿ ಅಲೆಯುತ್ತಿದ್ದ ನನ್ನನ್ನು ಬೇರೆ ಹೇಗೆ ತಾನೆ ಪರಿಚಯಿಸಿಕೊಳ್ಳಲಿ?

ನನ್ನ ದನಿ ದಿಕ್ಕುದಿಕ್ಕುಗಳಲ್ಲಿ ಪ್ರತಿಧ್ವನಿಸಿತು. ಇದಿರಿನಲ್ಲಿ ಕ್ಷಣಕಾಲ ನಿಶ್ಶಬ್ದ. ಮರುಕ್ಷಣ ನೆರೆದ ಜನಸ್ತೋಮ ಒಕ್ಕೊರಲಿನಲ್ಲಿ ಕೂಗಿತು: 'ಹಾಗಿದ್ದರೆ ನಮ್ಮನ್ನು ನಿನ್ನ ಜತೆ ಕರೆದುಕೊಂಡು ನಡೆ.'

ನಾನು ಬೆಚ್ಚಿದೆ. ಇಂತಹ ಬೇಡಿಕೆ ನನಗೆಂದೂ ಎದುರಾಗಿರಲಿಲ್ಲ. ಅವರನ್ನೇ ಬೆರಗು ಹತ್ತಿ ನೋಡಿದೆ. ನನ್ನ ಹೇಳಿಕೆಗೂ ಅವರ ಬೇಡಿಕೆಗೂ ನಡುವಿನ ಅವಧಿಯಲ್ಲಿ ಅವರು ದುಪ್ಪಟ್ಟಾಗಿದ್ದಂತೆನಿಸಿತು. ಇಷ್ಟು ಜನ ಇದುವರೆಗೆ ಎಲ್ಲಿದ್ದರು? ಇವರೆಲ್ಲರೂ ಇದ್ದಾಗ್ಯೂ ನಾನು ಒಬ್ಬಂಟಿ ಅಲೆಮಾರಿ ಹೇಗಾದೆ?

ನಾ ದಿಕ್ಕೆಟ್ಟು ಅಲೆಯುತ್ತಿದ್ದಾಗ ನನ್ನ ನಡಿಗೆಗೆ ನಡಿಗೆ ಕೂಡಿಸಲು, ಓಟಕ್ಕೆ ಓಟ ಜೋಡಿಸಲು ಇವರಿಗಾಗಲಿಲ್ಲವೇಕೆ? ಅಥವಾ ನಾನಿವರಿಗೆ ಕಾಣಲೇ ಇಲ್ಲವೇ? ನನಗೂ ಕಾಣಲಿಲ್ಲ ಅಂದರೆ ಇದೇನು ಚೋದ್ಯ! ಈಗ ನಡೆಯಲಾಗದಾಗ ಇವರೆಲ್ಲರೂ ಬಂದು ಎದುರಿಗೆ ನಿಂತರೆ ಹೇಗೆ? ನನಗೆ ಕಂಡರೆ ಹೇಗೆ? ನಮ್ಮನ್ನೂ ಜತೆಯಲ್ಲಿ ಕರೆದುಕೊಂಡು ನಡೆ ಅಂದರೆ ಹೇಗೆ? ನಾನು ಹೇಗೆ ತಾನೆ ಹ್ಞೂಂ ಅನ್ನಲಿ? ಈ ನಡೆಯಲಾಗದ ಕಾಲುಗಳಿಂದ ಇವರನ್ನು ಹೇಗೆ ತಾನೆ ಮುನ್ನಡೆಸಲಿ? ಎಲ್ಲಿಗೆ ಕರೆದುಕೊಂಡು ಹೋಗಲಿ? ದಾರಿಯನ್ನಷ್ಟಾದರೂ ತೋರೋಣವೆಂದರೆ ಅವರೇ ಅದಕ್ಕೆ ಅಡ್ಡವಾಗಿ ನಿಂತಿದ್ದಾರಲ್ಲ! ಹಿಂದಕ್ಕೆ ಕಣ್ಣು ತಿರುಗಿಸುವುದಂತೂ ಈ ಜನ್ಮದಲ್ಲಿ ನನ್ನಿಂದಾಗದು.

ಯೋಚನೆಗೆ ಬಿದ್ದೆ. ಕಣ್ಣುಗಳು ತಾವಾಗಿಯೇ ಮುಚ್ಚಿಕೊಂಡವು. ಇದಿರು ಕಾಣದಾಗಿ ಗತಸುರುಳಿ ಬಿಚ್ಚಿಕೊಂಡಿತು.

* * *

ಆದಿ?

ಬಗೆಗರಿವಿಲ್ಲ.

ಅಂತ್ಯ?

ಕಣ್ಣಳತೆಯೊಳಗಿಲ್ಲ.

ಎರಡರ ನಡುವಣ ಜಗತ್ತು?

ಅದು ಸುತ್ತಲೂ ದಿಗ್‌ದಿಗಂತದವರೆಗೆ ತೆರೆದುಕೊಂಡು ಬಿದ್ದಿತ್ತು.

ನಾನು ಅಲ್ಲೆಲ್ಲಾ ಅಲೆದಿದ್ದೆನಂತೆ. ನನಗೆ ನೆನಪಿಲ್ಲ. ಹಾಗೆ ಹೇಳಿ ಅವರಿವರು ನಕ್ಕಿದ್ದರು. ನಾನು ಹಾಗೆ ಅಲೆದದ್ದು ಏನೇನೋ ಆಗಬೇಕೆಂದುಕೊಂಡು ಮಾತುಗಳು, ಪಾಠಗಳು, ಬೈಗುಳಗಳು, ಪ್ರವಚನಗಳು, ಯೂಟ್ಯೂಬ್ ವಿಡಿಯೋಗಳು ತೋರಿದ ಈ ಜಗತ್ತಿನ ಅದೆಷ್ಟು ರಸ್ತೆ, ಓಣಿ, ಕಿರುಓಣಿಗಳಲ್ಲಂತೆ. ಮೆಟ್ಟಿಲಸರಣಿಗಳನ್ನು ಹತ್ತಿಳಿದಿದ್ದೆನಂತೆ. ಸುರಂಗಗಳನ್ನು ಹೊಕ್ಕಿ ಹೊರಬಂದಿದ್ದೆನಂತೆ. ಅದೂ ನನಗೆ ನೆನಪಿಲ್ಲ. ನನಗೆ ನೆನಪಿರುವುದು ನಾನು ಏನೂ ಅಲ್ಲ ಎಂಬ ಅರಿವು ತಟ್ಟಿದ ಕ್ಷಣ.

ಆಗ ಸಂಜೆಯಾಗುತ್ತಿತ್ತು.